# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 235 (189)
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 13.09.2022
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
| --- | --- | --- |
| (ಅ) | ಕೆಐಎಡಿಬಿ ವತಿಯಿಂದ ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಸರ್ವೆ ನಂ. 135/1 ರಲ್ಲಿ ಟ್ಯಾನರಿ ರಸ್ತೆಯಿಂದ ನಾಗವಾರದವರೆಗೆ ಕೆಐಎಡಿಬಿ ವತಿಯಿಂದ ಬಿಎಂಆರ್‌ಸಿಎಲ್ ಗೆ ಎಷ್ಟು ವಿಸ್ತೀರ್ಣದ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. | ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ನಾಗವಾರ ಗ್ರಾಮದ ಸರ್ವೆ ನಂ. 135/1ರ ಸ್ವತ್ತುಗಳನ್ನು ಮೆಟ್ರೋ ರೈಲು ಯೋಜನೆಗಾಗಿ ಒಟ್ಟು 1348.17 ಚ.ಮೀ., ವಿಸ್ತೀರ್ಣವನ್ನು ಭೂಸ್ವಾಧೀನಪಡಿಸಲು ದಿನಾಂಕ : 17.01.2019 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. |
| (ಆ) | ಸದರಿ ಜಮೀನಿಗೆ ಸಂಬಂಧಿಸಿದಂತೆ ಕೆಐಎಡಿಬಿ ವತಿಯಿಂದ ಎಷ್ಟು ಭೂ ಪರಿಹಾರವನ್ನು ನೀಡಲಾಗಿದೆ. | ಒಟ್ಟು 23,72,85,500.00 ಗಳ ಭೂಪರಿಹಾರ ಪಾವತಿಸಲಾಗಿದೆ. |

<table>
<tr><td>(ಇ)</td><td>ಮೇಲ್ಕಂಡ ಸ್ವತ್ತಿನ ಯಾವ ಯಾವ ಭೂ ಮಾಲೀಕರಿಗೆ ಎಷ್ಟು ಮೊತ್ತದ ಪರಿಹಾರ ನೀಡಲಾಗಿದೆ (ಪೂರ್ಣ ವಿವರಗಳೊಂದಿಗೆ ಮಾಹಿತಿ ನೀಡುವುದು)</td><td>
<table>
<tr><th>ಖಾತೆದಾರರ ಹೆಸರು</th><th>ಗುರುತಿನ ಸಂಖ್ಯೆ</th><th>ಸರ್ವೆ ನಂಬರ್</th><th>ವಿಸ್ತೀರ್ಣ (ಚ.ಮೀ)</th><th>ಪಾವತಿಸಿರುವ ಪರಿಹಾರದ ಮೊತ್ತ (ರೂ.ಗಳಲ್ಲಿ)</th></tr>
<tr><td>ಆರ್. ಚಂದ್ರಶೇಖರ್ ಬಿನ್ ಕೃಷ್ಣಯ್ಯ</td><td>NG-R6-UG-P59A, 59B</td><td>135/1</td><td>100.66</td><td>1,47,14,417.00</td></tr>
<tr><td>ಕೆ. ಚಂದ್ರಶೇಖರ್ ಬಿನ್ ಕೃಷ್ಣಯ್ಯ</td><td>NG-R6-UG-P60</td><td>135/1</td><td>540.05</td><td>12,22,09,513.00</td></tr>
<tr><td>ಕೆ. ಆನಂದ್ ಬಿನ್ ಕೃಷ್ಣಪ್ಪ</td><td>NG-R6-UG-P61</td><td>135/1</td><td>579.21</td><td>8,81,21,193.00</td></tr>
<tr><td>ಸೈಯ್ಯದ್ ಮುಸ್ತಾಫಾ</td><td>NG-R6-UG-P62A</td><td>135/1</td><td>107.23</td><td>1,17,28,311.00</td></tr>
<tr><td>ಸೈಯ್ಯದ್ ಮುಸ್ತಾಫಾ</td><td>NG-R6-UG-P64A</td><td>135/1</td><td>6.40</td><td>5,12,066.00</td></tr>
<tr><td colspan="3">ಒಟ್ಟು</td><td>1348.17</td><td>23,72,85,500.00</td></tr>
</table>
</td></tr>
<tr><td>(ಈ)</td><td>ಸದರಿ ಜಮೀನು ಬಿಡಿಎ ಸ್ವಾಧೀನದಲ್ಲಿದ್ದರೂ ಕಾನೂನು ಬಾಹಿರವಾಗಿ ಕೆಐಎಡಿಬಿ ಅಧಿಕಾರಿಗಳು ಶಾಮೀಲಾಗಿ, ಭೂ ಪರಿಹಾರ ಧನವನ್ನು ಭೂಮಾಲೀಕರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ</td><td>ನಾಗವಾರ ಗ್ರಾಮದ ಸ.ನಂ. 135/1 ರಲ್ಲಿ ಒಟ್ಟು 0-32 ಗುಂಟೆ ಜಮೀನಿದ್ದು, ಈ ಪೈಕಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 0-20 ಗುಂಟೆಗೆ ಅಧಿಸೂಚನೆ ಹೊರಡಿಸಿದ್ದು, ಉಳಿಕೆ 0-12 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸಿರುತ್ತಾರೆ.<br><br>ಹೊರತುಪಡಿಸಿರುವ ಜಮೀನಿನಲ್ಲೇ ಭಾಗಶಃ ಮೆಟ್ರೋ ರೈಲು ಯೋಜನೆಗಾಗಿ ಭೂಸ್ವಾಧೀನವಾಗಿರುತ್ತದೆ. ಬಿಡಿಎಯಿಂದ ಸ್ವಾಧೀನಪಡಿಸಿಕೊಂಡ 0-20 ಗುಂಟೆ ವಿಸ್ತೀರ್ಣದ ಜಮೀನಿಗೆ ಐತೀರ್ಪು ರಚಿಸಿರುವುದಿಲ್ಲ, ಹಾಗೂ ಪರಿಹಾರ ಪಾವತಿಸಿರುವುದಿಲ್ಲ.<br><br>ದಿ: 24.10.2019 ರಂದು ಮಾನ್ಯ ಮುಖ್ಯಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಭೂಸ್ವಾಧೀನ ಪ್ರಕ್ರಿಯೆಯ ಕುರಿತು ಕಾನೂನು ಇಲಾಖೆ ಅಭಿಪ್ರಾಯ ಪಡೆದು ಮುಂದಿನ ಕ್ರಮ ಜರುಗಿಸಲು ತೀರ್ಮಾನಿಸಲಾಗಿರುತ್ತದೆ.</td></tr>
</table>

ತದನಂತರ ದಿ: 07.11.2019 ರಂದು ಕಾನೂನು ಇಲಾಖೆಯಿಂದ ಅಭಿಪ್ರಾಯವನ್ನು ಪಡೆಯಲಾಗಿದ್ದು, ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

" Land acquisition process under Act No. 1 of 1894 shall be deemed to have lapsed in certain cases:

1) Notwithstanding anything contained in this Act, in any case of land acquisition proceedings initiated under the Land Acquisition Act, 1894 (1) where no award under section 11 of the said Land Acquisition Act has been made, the all provisions of this Act relating to the determination of compensation shall apply or (b) where an award under said section 11 has been made, then such proceedings shall continue under the provisions of the said Land Acquisition Act, as if the said Act has not been repealed.
2) Not withstanding contained n sub section (1), in case of land acquisition proceedings initiated under the Land Acquisition Act 1894 (1 of 1894) where an award under the said section 11 has been made five years or more prior to the commencement of this Act but the physical possession of the land has not been taken or the compensation has not been paid the said proceedings shall be deemed to the lapsed and the appropriate Government if it so chooses. Shall initiate the proceedings of such land acquisition afresh in accordance with the provisions of this Act.
3) Provided that where an award has been made and compensation in respect of a majority of land holdings has not been deposited in the account of the beneficiaries, then all beneficiaries specified in the notification for acquisition under section 4 of the said Land Acquisition Act, Shall be entitled to compensation in accordance with the provisions of this Act.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಡೆಸಲಾದ ಭೂಸ್ವಾಧೀನ ಪ್ರಕ್ರಿಯೆ Lapsed ಎಂದು ಪರಿಗಣಿಸಬೇಕಾಗುತ್ತದೆ. ಬಿಎಂಆರ್‌ಸಿಎಲ್ ಸಂಸ್ಥೆರವರು ಪರಿಹಾರ ಧನವನ್ನು ವಿತರಣೆ ಮಾಡಲು ಯಾವುದೇ ಬಾಧಕ ಇರುವುದಿಲ್ಲವೆಂದು ಕಾನೂನು ಇಲಾಖೆಯ ಅಭಿಪ್ರಾಯದಲ್ಲಿ ಉಲ್ಲೇಖಿಸಲಾಗಿದೆ.

ಈ ಹಿನ್ನಲೆಯಲ್ಲಿ ಕಾನೂನು ಇಲಾಖೆಯು ನೀಡಿರುವ ಅಭಿಪ್ರಾಯದಂತೆ ಭೂಮಾಲೀಕರಿಗೆ ಭೂಪರಿಹಾರ ಪಾವತಿಸಲಾಗಿರುತ್ತದೆ ಹಾಗೂ ಭೂಪರಿಹಾರ ವಿಚಾರದಲ್ಲಿ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ.

| | | |
|---|---|---|
| (ಉ) | ಹಾಗಾದಲ್ಲಿ ಈ ಸಂಬಂಧ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು | ಉದ್ಭವಿಸುವುದಿಲ್ಲ. |
| (ಊ) | ನಿಯಮ ಬಾಹಿರವಾಗಿ ನೀಡಲಾದ ಪರಿಹಾರದ ಮೊತ್ತವನ್ನು ಭೂಮಾಲೀಕರಿಂದ ಯಾವ ಕಾಲಮಿತಿಯಲ್ಲಿ ಹಿಂಪಡೆಯಲಾಗುವುದು. | ಉದ್ಭವಿಸುವುದಿಲ್ಲ. |

ಸಂಖ್ಯೆ: ಸಿಐ 211 ಐಎಪಿ (ಇ) 2022

(ಡಾ॥ ಮುರುಗೇಶ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು